## ರೋಸಾ ಜಮಾಲಿ ಅವರ ಪರ್ಷಿಯನ್ ಕವಿತೆಗಳು

# ಕೊನೆಯುಸಿರೆಳೆಯುತಿದೆ ತೆಹರಾನ್ ನನ್ನ ತೋಳಲಿ

ಮುದಿ ಆಕಳಿನಂತೆ
ಕೊನೆಯುಸಿರೆಳೆಯುತಿದೆ ತೆಹರಾನ್ ನನ್ನ ತೋಳಲಿ

ತಾನಿನ್ನೂ ಬದುಕಿರುವಾಗಲೇ
ತನ್ನ ಮೈಯ ಚರ್ಮ ಎಬ್ಬಿ
ಹದ ಮಾಡುವರೇನೋ ಎಂಬಂತೆ
ಭುಸುಗುಡುತಿದೆ ಮೆಲ್ಲಗೆ
ಉಸಿರೆಳೆಯುತಾ ಉಸಿರು ಬಿಡುತಾ
ಪಳಗಿದ ಹಸು
ಪಳಗಿಸಲಾಗದ ನನ್ನ ಕೇಶರಾಶಿಯೆಡೆಗೆ

ಮರುದಿನ ಇಷ್ಟೊತ್ತಿಗೆ ಬೀದಿ ಹೆಣವಾದಾಗ
ಎತ್ತಿಕೊಳ್ಳುವರು ಅವಳ ಕಳೆಬರವ
ಜಾಡಮಾಲಿಗಳು

ಹಿಂಜರಿಯುತಿದೆ ಹೆಣ್ಣು ನಾಯಿಯೊಂದು ಇಲ್ಲಿ..

ಈ ನಗರದ ಮತ್ತೊಂದು ಮಗ್ಗುಲಲ್ಲಿ
ಆಶ್ರಯ ಕೋರಿ ನಾನು ಅಡಗಿಕೊಳ್ಳುವೆ
ಯಾರಿಗೆ ಗೊತ್ತು ಸಿಗಬಹುದು ಅಲ್ಲಿ
ನನ್ನ ಕಳೆಬರಕ್ಕೊಂದು ಸುರಕ್ಷಿತ ತಾಣ!

ಇರಾನಿನ ರಾಜಧಾನಿ ತೆಹರಾನ್





# ಹಸಿರು ಪ್ಲಮ್ ಹಣ್ಣುಗಳು

ನಾನೊಂದು ಹಸಿರು ಪ್ಲಮ್ ಆಗಿ ಜನ್ಮ ತಳೆದೆ

ಜಗದ ಪಾಲಿಗೆ
ನಾನು ಕೇವಲ ಒಂದು ಸ್ವಾದ
ಬಾಯ ದುರ್ವಾಸನೆ ಓಡಿಸುವ ಸ್ವಾದ

ನನ್ನ ಋತುಮಾನ ಮುಗಿಯುವ ತನಕ
ಈ ಲೋಕದ ಮುಷ್ಟಿಯಲಿ ಮಾಗಿ
ಒದ್ದಾಡುವ ಸವಿರುಚಿ ನನ್ನ ಹಣೆಬರಹ
ಇದಕ್ಕಾಗೇ ಹುಟ್ಟಿದ್ದೇನೆ ನಾನು
ಮತ್ತೀ ಪ್ರಪಂಚ ತಪ್ಪದೇ ಉಪ್ಪು ಸವರಿ
ಬಾಯಿಗೆ ಹಾಕಿಕೊಳ್ಳುತ್ತದೆ ನನ್ನ

ಇದಕ್ಕಾಗೇ ಹುಟ್ಟಿದ್ದೇನೆ ನಾನು

ಆದರೆ
ಹುಟ್ಟಲೇ ಬೇಕಿತ್ತು!

ನಮ್ಮಲ್ಲಿ ಮಾವಿನ ಋತು ಇರುವ ಹಾಗೆ ಅಲ್ಲಿ
ಪ್ಲಮ್ ಸೀಜನ್ ಜನಪ್ರಿಯ